N5000020

# KANNADA

*Maximum Marks: 80*
*Time Allotted: Three Hours*
*Reading Time: Additional Fifteen Minutes*

## Instructions to Candidates

1. You are allowed an **additional fifteen minutes** for **only** reading the question paper.
2. You must **NOT** start writing during reading time.
3. This question paper has **11 printed pages and one blank page**.
4. It is divided into **two sections: Section A and Section B**.
5. It has **fifteen questions** in all.
6. **Section A** has **three questions.** All questions are compulsory.
7. While attempting **Multiple Choice Questions** in Section A, you are required to **write only ONE option as the answer**.
8. **Section B** has **twelve questions**. You are required to attempt **any four** questions in this section on **any three** out of the four prescribed textbooks.
9. The intended marks for questions are given in brackets [ ].

## Instruction to Supervising Examiner

1. Kindly read **aloud** the Instructions given above to all the candidates present in the examination hall.


© *Copyright reserved.*

## SECTION A
## LANGUAGE - 40 MARKS

**Question 1** **[15]**

**Write a composition in approximately 400 words in Kannada on any *one* of the topics given below.**

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿ 400 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

(i) ನಿಮ್ಮಜೀವನದ ಗುರಿ ಯಾವುದು ? ಅದಕ್ಕೆ ಕಾರಣಗಳು ನೀವು ಮಾಡುವ ತಯಾರಿ ಎಲ್ಲವನ್ನು ವಿವರಿಸುತ್ತಾ ಒಂದು ಪ್ರಬಂಧ ಬರೆಯಿರಿ.

(ii) 'ಪ್ರವಾಸವು ನಮ್ಮ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತದೆ' ಈ ಹೇಳಿಕೆಯ ಬಗ್ಗೆ ನಿಮ್ಮ ವಿಚಾರಗಳನ್ನು ಬರೆಯಿರಿ.

(iii) ನೈಸರ್ಗಿಕ ವಿಕೋಪಗಳು ಮತ್ತು ಪರಿಹಾರೋಪಾಯಗಳ ಕುರಿತಾಗಿ ಪ್ರಬಂಧ ಬರೆಯಿರಿ.

(iv) ದೇಶದ ಅಭಿವೃದ್ಧಿಗೆ ವಿಜ್ಞಾನದ ಕೊಡುಗೆ ಈ ವಿಷಯದ ಕುರಿತಾಗಿ ಒಂದು ಪ್ರಬಂಧ ಬರೆಯಿರಿ.

(v) ಇಂದು "ನಗರಗಳಲ್ಲಿನ ಯಾಂತ್ರಿಕಜೀವನ ಹಾಗೂ ಒತ್ತಡಗಳಿಂದಾಗಿ ಹಬ್ಬಗಳು ನಗರಗಳಲ್ಲಿ ಅರ್ಥ ಕಳೆದುಕೊಳ್ಳುತ್ತಿವೆ". ಈ ಬಗ್ಗೆ ಉದಾಹರಣೆಯೊಂದಿಗೆ ವಿವರಿಸಿ.

(vi) ಕೆಳಗೆ ನೀಡಲಾಗಿರುವ ಯಾವುದಾದರೊಂದು ವಿಷಯದ ಬಗ್ಗೆ ಮೂಲ ಕಥೆ ಬರೆಯಿರಿ.

   (a) 'ಕೋಪವೆಂಬುದು ಅನರ್ಥ ಸಾಧನ'– ಈ ಹೇಳಿಕೆಯನ್ನು ಕುರಿತಂತೆ ಒಂದು ಸ್ವಕಲ್ಪಿತ ಕತೆಯನ್ನು ಬರೆಯಿರಿ.

   (b) 'ಆ ಘಟನೆ ನನ ್ನಕಣ್ಣು ತೆರೆಸಿತು' ಎಂದು ಮುಕ್ತಾಯವಾಗುವ ಒಂದು ಕಥೆ ಬರೆಯಿರಿ.

**Question 2**

**Read the passage given below carefully and answer the questions that follow, using your own words in Kannada.**

**ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸಿ.**

ಮನುಷ್ಯನ ವ್ಯಕ್ತಿತ್ವದ ಮೇಲೆ ಧೈರ್ಯದ ಪ್ರಭಾವ ಹೆಚ್ಚಾಗಿದೆ. ಜೀವನದ ಪ್ರತಿಯೊಂದು ಘಟನೆಯಲ್ಲೂ ಧೈರ್ಯವು ಮಹತ್ವ ಪೂರ್ಣವಾಗಿದೆ. ಸಮಸ್ಯೆಗಳು, ಕಷ್ಟಗಳು, ಅಪಾಯಗಳು ನಿವಾರಣೆಯಾಗಬೇಕಾದರೆ ಧೈರ್ಯಬೇಕು. ಎಷ್ಟು ಧೈರ್ಯವಿರುತ್ತದೆಯೋ ಅಷ್ಟೇ ಸಫಲತೆಯನ್ನು ಹೊಂದುತ್ತಾರೆ. ಧೈರ್ಯವಿದ್ದಲ್ಲಿ ಚಟುವಟಿಕೆ ಇರುತ್ತದೆ. ಆದ್ದರಿಂದ ನಗುನಗುತ್ತಾ ಆನಂದದಿಂದ ಇರುತ್ತಾರೆ. ಧೈರ್ಯವಿದ್ದಲಿ ಸಮಸ್ಯೆಗಳಿದ್ದರೂ ನಮಗೆ ಕಾಣುವುದೇ ಇಲ್ಲ.

ಒಳ್ಳೆಯ ಈಜುಗಾರನೊಬ್ಬನು ನದಿಯಲ್ಲಿ ಈಜುತ್ತಿದ್ದನು. ನದಿಯ ಮುಕ್ಕಾಲು ಭಾಗ ಈಜಿದ್ದನು. ಏನೇನಿಸಿತೋ ಏನೋ ತುಸುತಿರುಗಿ ನೋಡಿದನು. ಇಷ್ಟು ದೂರ ಬಂದಿರುವೆನೇ ಎಂದು ದಿಗಿಲುಂಟಾಯಿತು. ಅಷ್ಟರಲ್ಲಿ ಅವನು ಮುಳುಗಿಯೇ ಹೋದನು. ಪರ್ವತಾರೋಹಿಗಳಿಗೆ ಬೆಟ್ಟವೇರಲು ಧೈರ್ಯವೇ ಅವರ ಬಂಡವಾಳ. ಅದರೊಡನೆ ಶಾಂತಿ, ಸಹನೆ, ತಾಳ್ಮೆ, ಶಕ್ತಿ, ಚೈತನ್ಯವೆಲ್ಲವೂ ಬೇಕು. ಆದರೆ ಅವೆಲ್ಲಕ್ಕಿಂತಲೂ ಮುಖ್ಯವಾಗಿ ಧೈರ್ಯಬೇಕು. ಧೈರ್ಯವಿಲ್ಲದವರು ಅರ್ಧದಿಂದಲೇ ಹಿಂತಿರುಗುತ್ತಾರೆ. ತೇನ್ಸಿಂಗ್ ಮತ್ತು ಹಿಲೇರಿ ಗೌರಿಶಂಕರ ಶಿಖರವನ್ನು ಮೊಟ್ಟ ಮೊದಲು ಏರಿದರು. ಆ ಎತ್ತರವನ್ನು ಏರಲು ಕಾರಣವಾದುದು ಅವರ ಧೈರ್ಯವೇ ಸರಿ. ಶಾರೀರಿಕ ದೌರ್ಬಲ್ಯವಿದ್ದರೂ ಮಾನಸಿಕ ಧೈರ್ಯವೊಂದಿದ್ದರೆ, ಮನುಷ್ಯ ಏನನ್ನಾದರೂ ಸಾಧಿಸಬಹುದು.

ಪಾಲು ಬಂಡವಾಳ ಹಾಕಿ ಒಬ್ಬನು ವ್ಯಾಪಾರ–ವ್ಯವಹಾರ ನಡೆಸುತ್ತಿದ್ದನು. ಪಾಲುದಾರ ಮತ್ತು ಗುಮಾಸ್ತರಿಬ್ಬರೂ ಸುಳ್ಳು ಲೆಕ್ಕ ಬರೆದು ಮೋಸಮಾಡಿದರು. ಇದರಿಂದ ಇದ್ದುದನ್ನೆಲ್ಲಾ ಕಳೆದುಕೊಂಡು ಬಾಡಿಗೆ ಮನೆಯಲ್ಲಿ ವಾಸಮಾಡತೊಡಗಿದನು. ಆದರೆ ಅವನು ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಸಾಲಪಡೆದುಅಲ್ಪ ಪ್ರಮಾಣದ ಬಂಡವಾಳ ಹೂಡಿ, ವ್ಯಾಪಾರವನ್ನು ಪ್ರಾರಂಭಿಸಿದನು. ಕೆಲವೇ ವರ್ಷಗಳಲ್ಲಿ ಹಿಂದೆಂದೂ ಮಾಡದ ವ್ಯಾಪಾರವನ್ನು ಮೀರಿಸುವಂತೆ ವ್ಯಾಪಾರ ನಡೆಯಿತು. ಲಾಭವನ್ನು ಪಡೆಯತೊಡಗಿದನು. ಧೈರ್ಯದಿಂದ ಇದು ಸಾಧ್ಯವಾಯಿತು. ಧೈರ್ಯವೇ ಮನುಷ್ಯನನ್ನುಕಾಪಾಡುತ್ತದೆ. ಇದೇ ಬಾಳಿನ ಚೈತನ್ಯ, ಯಶಸ್ಸಿನ ಗುಟ್ಟು, ಶಕ್ತಿ ಸಂವರ್ಧಕ, ಜೀವನದ ಸಫಲತೆಗೆ, ವ್ಯಕ್ತಿತ್ವವು ಸುಸಜ್ಜಿತವಾಗಿ ರೂಪುಗೊಳ್ಳುವುದಕ್ಕೆ, ಧೈರ್ಯವೇ ಮೂಲ ಕಾರಣ. ಮನುಷ್ಯರಿಗೆ ಸಮಸ್ಯೆಗಳು ಬಂದಾಗ, ಸಹಜವಾಗಿ ಧೈರ್ಯವನ್ನು ಕಳೆದುಕೊಳ್ಳುತ್ತಾರೆ.

ಧೈರ್ಯಗುಂದಿದಾಗ ಶಕ್ತಿ, ಚೈತನ್ಯಗಳೆಲ್ಲ ಕುಂದಿ ಹೋಗುತ್ತವೆ. ಇದರಿಂದ ಹೆಜ್ಜೆಹೆಜ್ಜೆಗೂ ಸೋಲುಗಳುಂಟಾಗುತ್ತವೆ. ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ. ನಾನಾ ತೆರನಾದ ಸಮಸ್ಯೆಗಳಿಗೆ ಕೊನೆ ಇದ್ದೇಇರುತ್ತವೆ. ಸಮಸ್ಯೆಗಳನ್ನು ದೊಡ್ಡದು ಮಾಡಿ ಹಾಳಾಗಬಾರದು. ಪ್ರತಿಯೊಬ್ಬರ ಒಳಗೂ ಅಪಾರವಾದ ಶಕ್ತಿಚೈತನ್ಯ ಸಾಮರ್ಥ್ಯಗಳು ತುಂಬಿಕೊಂಡಿವೆ. ಈ ಸಮಸ್ಯೆಯನ್ನುಗೆದ್ದೆಗೆಲ್ಲುತ್ತೇನೆ, ಗೆಲ್ಲದೇ ಇರಲು ಸಾಧ್ಯವಿಲ್ಲ ಎಂಬ ಆತ್ಮವಿಶ್ವಾಸ ಹಾಗೂ ಭರವಸೆಇರಬೇಕು. ವರ್ತಮಾನವನ್ನು ಸರಿಯಾಗಿದೆ ಎಂಬ ಭರವಸೆಯ ಆತ್ಮವಿಶ್ವಾಸದಿಂದ ಸ್ವೀಕರಿಸಿರಿ. ಭವಿಷ್ಯವನ್ನುಆಶಾಭಾವನೆಯಿಂದ, ಧೈರ್ಯ, ಸ್ಫೂರ್ತಿಯಿಂದ ಸ್ವೀಕರಿಸಿದರೆ ಜೀವನದಲ್ಲಿಗೆಲುವನ್ನು ಸಾಧಿಸುವುದು ಖಂಡಿತ. ಕಷ್ಟ–ಸುಖ, ಲಾಭ–ನಷ್ಟ, ಸೋಲು–ಗೆಲುವು, ನಿಂದೆ–ಸ್ತುತಿ, ಮಾನ–ಅಪಮಾನ ಇವೆಲ್ಲವನ್ನೂ ಸಮಾನ ದೃಷ್ಟಿಯಿಂದ ತುಂಬು ಹೃದಯದಿಂದ ಸ್ವಾಗತಿಸಿದರೆ, ಜೀವನವು ಸುಂದರವಾಗಿರುತ್ತದೆ. ಧೈರ್ಯವೇ ಜೀವನದ ಭರವಸೆಯ ಆಧಾರಸ್ತಂಭ.

(i) ಪರ್ವತಾರೋಹಿಗಳು ಎತ್ತರವಾದ ಬೆಟ್ಟವೇರಲು ಹೇಗೆ ಸಾಧ್ಯವಾಯಿತು? [3]

(ii) ವ್ಯಾಪಾರಿಗೆ ಮೋಸ ಮಾಡಿದವರುಯಾರು? ಇದರಿಂದ ಆ ವ್ಯಾಪಾರಿಯು ತನ್ನ ವ್ಯಾಪಾರವನ್ನು ಬಿಟ್ಟು ಬಿಟ್ಟನೇ? [3]

(iii) ಜೀವನದ ಭರವಸೆಯ ಆಧಾರಸ್ತಂಬ ಯಾವುದು? ಹೇಗೆ? [3]

(iv) ತೇನ್ಸಿಂಗ್ ಮತ್ತು ಹಿಲೇರಿ ಗೌರಿಶಂಕರ ಶಿಖರವನ್ನು ಮೊಟ್ಟಮೊದಲು ಏರಿದರು.

(a) 'ಪರ್ವತಾರೋಹಿಗಳಿಗೆ ಬೆಟ್ಟವೇರಲು ಸಾಧ್ಯವಾಗಿರುವುದು'– ಇದರಿಂದ: [1]

(1) ಭಯ

(2) ಸಂತೋಷ

(3) ಧೈರ್ಯ

(4) ಆತಂಕ

(b) ಮನುಷ್ಯಧೈರ್ಯಗುಂದಿದಾಗ ಕುಂದಿ ಹೋಗುವುದು [1]

(1) ಕಷ್ಟ–ಸುಖ

(2) ಲಾಭ–ನಷ್ಟ

(3) ಸೋಲು–ಗೆಲುವು

(4) ಶಕ್ತಿ–ಚೈತನ್ಯ

(c) ಭವಿಷ್ಯವನ್ನು ಹೀಗೆ ಸ್ವೀಕರಿಸಿದರೆ ಗೆಲುವು ಸಾಧಿಸಬಹುದು? [1]

(1) ತಿರಸ್ಕಾರ ಭಾವನೆ

(2) ಆಶಾಭಾವನೆ

(3) ಅಹಂಕಾರ ಭಾವನೆ

(4) ಕಠೋರ

(v) ಈಜುಗಾರನಿಗೆ ಇಷ್ಟು ದೂರ ಬಂದಿರುವೆನೇಎಂದು ದಿಗಿಲುಂಟಾಯಿತು.

(a) ದಿಗಿಲು ಇದಕ್ಕೆ ಸಮಾನ ಅರ್ಥಕೊಡುವ ಪದ. [1]

(1) ಹೆದರಿಕೆ

(2) ಹಿಂಜರಿಕೆ

(3) ನಾಚಿಕೆ

(4) ಅನುಮಾನ

(b) ಸ್ತುತಿ–ಎಂದರೆ: [1]

(1) ತೆಗಳಿಕೆ

(2) ಹೊಗಳಿಕೆ

(3) ಸುತ್ತಿಗೆ

(4) ಮಾತು

(c) ವ್ಯಾಪಾರಿಗೆ ಮೋಸವಾಗಿರುವುದು. [1]

(1) ಅಜ್ಞಾನದಿಂದ

(2) ಕಲಬೆರಕೆಯಿಂದ

(3) ವಸ್ತುಗಳ ಕೊರತೆಯಿಂದ

(4) ಸುಳ್ಳು ಲೆಕ್ಕ ಬರೆದು

**Question 3**

(A) **Answer the following questions as per the instructions given.**
**ಕೆಳಗಿನ ಪ್ರಶ್ನೆಗಳಿಗೆ ಸೂಚನೆಯ ಪ್ರಕಾರ ಉತ್ತರಿಸಿ.**

(i) ಕೆಳಗಿನ ವಾಕ್ಯದ ಶುದ್ಧರೂಪ ಬರೆಯಿರಿ. [1]

ಮನೆಯ ಹಂಗಳದಲ್ಲಿ ಮಕ್ಕಳು ಆಡುತ್ತಿದ್ದಾರೆ.

(ii) ಬಿಟ್ಟು ಹೋಗಿರುವ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆಯಿರಿ. [1]

ವಾಹನಗಳು ಬೆಟ್ಟಪ್ರದೇಶ ____________ ನಿಧಾನವಾಗಿ ಚಲಿಸುತ್ತವೆ.

(iii) ಕೆಳಗಿನ ವಾಕ್ಯಗಳಲ್ಲಿ ಸರಿಯಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಬಿರುಗಾಳಿಯಿಂದ ಭಯಂಕರ ಮರವನ್ನು ಉರುಳಿತು.

(b) ಭಯಂಕರ ಬಿರುಗಾಳಿಯು ಮರವು ಉರುಳಿತು.

(c) ಭಯಂಕರ ಬಿರುಗಾಳಿಗೆ ಮರಗಳು ಉರುಳಿದವು.

(d) ಮರವು ಬಿರುಗಾಳಿಯಿಂದ ಭಯಂಕರ ಉರುಳಿತು.

(iv) ತಪ್ಪಾದ ವಾಕ್ಯವನ್ನು ಆರಿಸಿ ಬರೆಯಿರಿ. [1]

(a) ಬೋರಣ್ಣನು ತುಂಬಾ ಶ್ರಮಜೀವಿಯಾಗಿದ್ದನು.

(b) ಬೋರಣ್ಣನು ಕುರಿಗಳನ್ನು ಮೇಯಿಸಲು ಹೊಲಕ್ಕೆ ಹೋದನು.

(c) ಬೋರಣ್ಣನುತೋಟಕ್ಕೆ ಹೋದನು.

(d) ಬೋರಣ್ಣನು ಗಿಡಗಳಿಂದ ನೀರು ಹರಿಸಿದನು.

(v) ಕೆಳಗಿನ ವಾಕ್ಯದಲ್ಲಿಗೆರೆ ಎಳೆದ ಪದದಇನ್ನೊಂದುಅರ್ಥ ಬರೆಯಿರಿ. [1]

ಈ ಕಷ್ಟಗಳಿಂದ ನನ್ನನ್ನು ಪಾರುಮಾಡು ಎಂದು ಆತ ದೇವರಲ್ಲಿ <u>ಮೊರೆಯಿಟ್ಟನು.</u>

(a) ಕೂಗು

(b) ಬೇಡು

(c) ಆರ್ಭಟಿಸು

(d) ಆಕರ್ಷಿಸು

**(B) Use the idioms in the sentences as per the instructions given.**

**ಕೆಳಗಿನ ಭಾಷಾವೈಶಿಷ್ಟ್ಯಗಳನ್ನು ಗಮನಿಸಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.**

(i) ಕೆಳಗಿನ ನುಡಿಗಟ್ಟಿನ ಅರ್ಥ ಬರೆಯಿರಿ. [1]

ಕೆಂಡಕಾರು

(ii) ಕೆಳಗಿನವುಗಳಲ್ಲಿ ಸರಿಯಾದ ನುಡಿಗಟ್ಟನ್ನು ಆರಿಸಿ ಬರೆಯಿರಿ. [1]

(a) ಗೋಚರಿಸು

(b) ಗೋಳಾಡು

(c) ಅಟ್ಟಕೇರಿಸು

(d) ಅನುಕಂಪನ

(iii) ಕೆಳಗಿನ ವಾಕ್ಯಕ್ಕೆ ಸರಿಹೊಂದುವ ನುಡಿಗಟ್ಟನ್ನು ಆರಿಸಿ ಬರೆಯಿರಿ. [1]

ಭೀಕರ ಪ್ರವಾಹಕ್ಕೆ ಸಿಲುಕಿದ ಜನರ ರೋಧನೆ ಕೇಳಿ ಬಹಳ ದುಃಖವಾಯಿತು.

(a) ಉಭಯ ಸಂಕಟ

(b) ಕರುಳು ಕಿತ್ತುಬರು

(c) ಕೈಕೊಡು

(d) ತಲೆ ಭಾರವಾಗು

**(C) Use the proverbs in the sentences as per the instructions given.**

**ಕೊಟ್ಟಿರುವ ಗಾದೆ ಮಾತನ್ನು ಸೂಚನೆಯಂತೆ ಬರೆಯಿರಿ.**

(i) ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ [1]

ಆಳಾಗಿ ದುಡಿ __________ __________

(a) ಚೆನ್ನಾಗಿ ಸಂಪಾದಿಸು

(b) ಅರಸನಾಗಿ ಉಣ್ಣು

(c) ಅರಸನಾಗಿ ಕುಣಿ

(d) ಯಜಮಾನನಾಗಿ ಬಾಳು

(ii) ಕೆಳಗಿನವುಗಳಲ್ಲಿ ಸರಿಯಾದ ಗಾದೆಯನ್ನು ಆರಿಸಿ ಬರೆಯಿರಿ. [1]

(a) ತುಂಬಿದಕೊಡ ಹೊರಳುವುದಿಲ್ಲ

(b) ತುಂಬಿದಕೊಡ ಬಳಕುವುದಿಲ್ಲ

(c) ತುಂಬಿದಕೊಡ ತುಳುಕುವುದಿಲ್ಲ

(d) ತುಂಬಿದಕೊಡ ಬಾಗುವುದಿಲ್ಲ

## SECTION B
## LITERATURE – 40 MARKS

***Answer any four questions from this section on any three out of the four prescribed textbooks.***

*ನಿಗದಿತ ನಾಲ್ಕು ಪಠ್ಯಪುಸ್ತಕಗಳಲ್ಲಿ ಯಾವುದಾದರೂ ಮೂರರಲ್ಲಿ ಈ ವಿಭಾಗದಿಂದ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.*

### ಕನ್ನಡ ಕಿರಣ [KANNADA KIRANA]

**Question 4**

'ಸ್ವಲ್ಪ ಹೊತ್ತಿನ ನಂತರ ಮೈತಿಳಿದೆದ್ದ ಸ್ವಾಮೀಜಿದೇವಾಲಯದ ಆಚೆ ಬಂದು ಮಹಾಸಾಗರವನ್ನು ದಿಟ್ಟಿಸುತ್ತ ನಿಂತರು.'

(i) ಸ್ವಾಮಿ ವಿವೇಕಾನಂದರು ಕನ್ಯಾಕುಮಾರಿಯನ್ನುಯಾವ ಮಾರ್ಗವಾಗಿತಲುಪಿದರು ? [1]

(ii) ದೇವಿಯಆಲಯವನ್ನು ಪ್ರವೇಶಿಸಿದ ಸ್ವಾಮೀಜಿ ಏನು ಮಾಡಿದರು? [2]

(iii) ಶಾಕ್ತರ ನಂಬಿಕೆ ಏನು? [2]

(iv) ಸ್ವಾಮಿ ವಿವೇಕಾನಂದರು ತಪಸ್ಸನ್ನಾಚರಿಸಿದ ಆ ಶಿಲೆಯ ವಿಶೇಷತೆಯೇನು? ವಿವರಿಸಿ. [5]

**Question 5** [10]

ಶಾಸ್ತ್ರಿಗಳ ಮನೆಯ ಚಿತ್ರಣ ಹೇಗಿತ್ತು ?

**Question 6** [10]

ಮಾನವ ಪ್ರಕೃತಿಯೊಂದಿಗೆ ಇರುವ ಮೂರು ಪ್ರಕಾರದ ಸಂಬಂಧಗಳಾವುವು ?

## ಕಾವ್ಯ ಸುಧೆ (KAVYA SUDHE)

**Question 7**

'ಊರು ಸಮೀಪಿಸುತ್ತಿದ್ದಂತೆ

ಆಸುಪಾಸು ಕೊಳೆಗೇರಿ ಹಾಸಿರುತ್ತವೆ

ಮೊದಲು ಹಾಸಿದ್ದು ಹಳಿಯನ್ನೊ ಅಥವಾ ಸ್ಲಮ್ಮನ್ನೊ ?'

(i) ನಾಗರಿಕತೆಯ ಜೀವನಾಡಿಯಾವುದು? ಅದು ಓಡುವುದು ಯಾವುದರ ಮೇಲೆ ? [1]

(ii) ಈ ದೇಶವನ್ನುಅರಿಯಬೇಕೆಂದರೆ ನಾವು ಯಾವುದರಲ್ಲಿ ಪ್ರಯಾಣಿಸಬೇಕು ? ಅದು ಏನನ್ನು ವಿವರಿಸುತ್ತದೆ ? [2]

(iii) ಜನರುರೈಲು ನಿಲ್ದಾಣದಲ್ಲಿ ಏಕೆ ಮೂಗು ಹಿಡಿದು ಕುಳಿತುಕೊಳ್ಳುತ್ತಾರೆ ? [2]

(iv) ರೈಲಿನ ಅಂತರಂಗದಲ್ಲಿ ಸಿಗುವ ಮೋಸದಾಟದ ಮೋಜುಗಳೇನು ? [5]

**Question 8** [10]

ಹಣವಂತರು ಬಡವರ ಮೇಲೆ ಮಾಡುವ ಶೋಷಣೆಯನ್ನು ಕವಿ 'ಕುರುಡುಕಾಂಚಾಣ' ಪದ್ಯದಲ್ಲಿ ಹೇಗೆ ವಿವರಿಸಿದ್ದಾರೆ?

**Question 9** [10]

ಮನುಷ್ಯನು ಹೊಟ್ಟೆಪಾಡಿಗಾಗಿ ಯಾವ ಯಾವ ರೀತಿಯ ನಾಟಕವನ್ನಾಡುತ್ತಾನೆಂದು ಪುರಂದರದಾಸರು'ಉದರ ವೈರಾಗ್ಯ'ಕೀರ್ತನೆಯಲ್ಲಿ ತಿಳಿಸಿದ್ದಾರೆ?

## ಪ್ರೇಮಭಿಕ್ಷು (PREMA BHIKSHU)

**Question 10**

'ಅಂಗುಲಿಮಾಲ ಬಂಡೆಯಿಂದ ಧುಮುಕಿದ ಅವನ ಹಿಂಬಾಲಕರೂ ತಕ್ಷಣ ಹಾಗೆಯೇ ಮಾಡಿದರು. ಅವನು ಹೇಳಿದ; ನಾನು ಚಕ್ರವರ್ತಿ!'

(i) ಅಂಗುಲಿಮಾಲನ ಇಬ್ಬರು ಹಿಂಬಾಲಕರನ್ನು ಹೆಸರಿಸಿ. [1]

(ii) ಅಂಗುಲಿಮಾಲನ ಕೈಯಖಡ್ಗ ನೆಲಕ್ಕೆ ಜಾರಿ ಬಿದ್ದ ಬಗೆ ಹೇಗೆ ? [2]

(iii) ಬುದ್ಧಅಂಗುಲೀಮಾಲನ ಬೆನ್ನನ್ನು ಸವರಿದಾಗ ಅವನಿಗಾದ ಅನುಭವವೇನು ? [2]

(iv) ತನ್ನ ಮುಂದಿರುವವನು ಬುದ್ಧನೆಂದು ತಿಳಿದಾಗ, ಅಂಗುಲಿಮಾಲನು ಏನೆಂದು ಅರಿಕೆ ಮಾಡಿಕೊಂಡನು ? [5]

**Question 11** [10]

ಬುದ್ಧನು ಹೇಳಿದ ಮಹಾಪಿಂಗಲನ ಕತೆಯನ್ನು ತಿಳಿಸಿ.

**Question 12** [10]

ಬುದ್ಧನಿಗೆ ಹಿಮಾಲಯದಿಂದ ಬಂದ ಕರುಣೆಯ ಮೊದಲ ಸಂದೇಶದ ಪ್ರಸಂಗವನ್ನು ವಿವರಿಸಿ.

## ಹೆಬ್ಬೆರಳು (HEBBERALU)

**Question 13**

'ಏಂ ಮರುಳೊ ನಮ್ಮೇಕಲವ್ಯನಿಗೆ! ನಮ್ಮೂರ
ಬಳಿಯ ಬಯಲಲಿ ದ್ರೋಣನಾ ಮಣ್ಣಗೊಂಬೆಯ
ನ್ನಿರಿಸಿ ಮುಂದೆ ನಿಂದು ಸರಳ್ಗಳನ್ನೆಸೆದೆಸೆದು ಬಿಲ್ವಿದ್ಯೆಯಂ ಕಲಿವನಂತೆ'

(i) ಈ ಮೇಲಿನ ಮಾತನ್ನುಯಾರುಯಾರಿಗೆ ಹೇಳಿದರು ? [1]

(ii) ಹಿರಣ್ಯಧನು ಚಿಂತಿತನಾಗಿ ಏಕಿದೆಲ್ಲಾ ಕಾಟ? ಏಕೆ ಈ ಬಗೆಯಾಟ ? ಎಂದಾಗ ಗೊಂದಳದವರು ಏನು ಹೇಳಿದರು ? [2]

(iii) ಏಕಲವ್ಯನು ತಾತ ನಾನು ಹೋಗಿ ಬರುವೆ, ಅಪ್ಪಣೆ ಮಾಡು ಎಂದಾಗ ಹಿರಣ್ಯಧನುವಿನ ಪ್ರತಿಕ್ರಿಯೆ ಏನು ? [2]

(iv) ಹಿರಣ್ಯಧನು ಏಕಲವ್ಯನಿಗೆ ಹೇಳಿದ ಬುದ್ಧಿ ಮಾತುಗಳೇನು ? [5]

**Question 14** **[10]**

ಏಕಲವ್ಯನ ಬಿಲ್ವಿದ್ಯೆಯನ್ನು ನೋಡಿದಾಗ ಹಿರಣ್ಯಧನುವಿಗಾದ ಗೊಂದಲ ಮತ್ತು ಅವನ ಬಿಲ್ವಿದ್ಯೆಯನ್ನುನೋಡಿದ ಗೊಂದಳದವರ ಹೊಗಳಿಕೆಯ ಮಾತುಗಳೇನು ವಿವರಿಸಿ.

**Question 15** **[10]**

ಗುರುದ್ರೋಣರು ಏಕಲವ್ಯನಿಗೆ ವಿದ್ಯೆ ಹೇಳಿ ಕೊಡಲು ಸಾಧ್ಯವಿಲ್ಲವೆನ್ನಲು ನೀಡುವ ಕಾರಣಗಳೇನು? ವಿವರಿಸಿ.